All India Radio: Bangalore
National Bulletin In Kannada
26.12.2025 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
26.12.2025 7.35 am
<><><*><><<>

ಮುಖ್ಯಾಂಶಗಳು

೧. ನವದೆಹಲಿಯಲ್ಲಿಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ರಾಷ್ಟ್ರೀಯ ಬಾಲ ಪುರಸ್ಕಾರ ಪ್ರದಾನ

೨. ಭಯೋತ್ಪಾದನಾ ನಿಗ್ರಹ ಸಮಾವೇಶಕ್ಕೆ ದೆಹಲಿಯಲ್ಲಿಂದು ಚಾಲನೆ ನೀಡಲಿರುವ ಕೇಂದ್ರ ಸಚಿವ ಅಮಿತ್ ಶಾ

೩. ಭಾರತೀಯ ಸೇನೆಯಿಂದ ಸಾಮಾಜಿಕ ಜಾಲತಾಣ ಬಳಕೆಯ ಆಂತರಿಕ ಮಾರ್ಗಸೂಚಿ ಪ್ರಕಟ

೪. ಭಾರತ-ಶ್ರೀಲಂಕಾ ಮಹಿಳಾ ಟಿ-೨೦ ಕ್ರಿಕೆಟ್: ಮೂರನೇ ಪಂದ್ಯದಲ್ಲಿಂದು ಸರಣಿ ಕೈವಶ ಮಾಡಿಕೊಳ್ಳುವ ತವಕದಲ್ಲಿ ಭಾರತ

<><><*><><<>

ವೀರಬಾಲ ದಿವಸ್ ಅಂಗವಾಗಿ ನವದೆಹಲಿಯಲ್ಲಿಂದು ನಡೆಯಲಿರುವ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 'ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ' ಪ್ರದಾನ ಮಾಡಲಿದ್ದಾರೆ. ಈ ವರ್ಷ ೧೮ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ೨೦ ಮಕ್ಕಳನ್ನು ಈ ಗೌರವಕ್ಕೆ ಆಯ್ಕೆ ಮಾಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ತಿಳಿಸಿದೆ. ವೀರಬಾಲ ದಿವಸ್ ನ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಕ್ಕಳು ಮತ್ತು ಯುವಕರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಸಚಿವಾಲಯ ತಿಳಿಸಿದೆ. ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಅನ್ನಪೂರ್ಣ ದೇವಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮ, ಶೌರ್ಯ, ಸ್ಥಿತಿಸ್ಥಾಪಕತ್ವ ಮತ್ತು ನಿಸ್ವಾರ್ಥ ಸೇವೆಯ ಪ್ರತೀಕವಾಗಿದ್ದು, ದೇಶದ ಶ್ರೀಮಂತ ನಾಗರಿಕ ಪರಂಪರೆ ಮತ್ತು ಶೌರ್ಯದ ಮನೋಭಾವವನ್ನು ಪ್ರದರ್ಶಿಸುವ ಸಾಂಸ್ಕೃತಿಕ ಪ್ರದರ್ಶನಗಳಿಗೂ ಸಾಕ್ಷಿಯಾಗಲಿದೆ. ಶ್ರೀ ಗುರು ಗೋವಿಂದ ಸಿಂಗ್ ಜಿ ಅವರ ಪುತ್ರರಾದ ಬಾಬಾ ಜೋರಾವರ್ ಸಿಂಗ್ ಜಿ ಮತ್ತು ಬಾಬಾ ಫತೇ ಸಿಂಗ್ ಜಿ ಅವರ ಶೌರ್ಯ, ತ್ಯಾಗವನ್ನು ಗೌರವಿಸಲು 'ವೀರ್ ಬಾಲ್ ದಿವಸ್' ಆಚರಿಸಲಾಗುತ್ತದೆ.

<><><*><><<>

ಕೇಂದ್ರ ಗೃಹ ಸಚಿವ ಅಮಿತ್ ಶಾ ನವದೆಹಲಿಯಲ್ಲಿಂದು ಭಯೋತ್ಪಾದನಾ ನಿಗ್ರಹ ಸಮಾವೇಶವನ್ನು ಉದ್ಘಾಟಿಸಲಿದ್ದಾರೆ. ಈ ಎರಡು ದಿನಗಳ ಸಮಾವೇಶವು, ರಾಷ್ಟ್ರೀಯ ಭದ್ರತೆಯ ಮೇಲೆ ಪರಿಣಾಮ ಬೀರುವ ವಿಷಯಗಳು ಮತ್ತು ಭಯೋತ್ಪಾದನೆಯಿಂದ ಉದ್ಭವಿಸುವ ಬೆದರಿಕೆಗಳ ಕುರಿತು ಚರ್ಚಿಸಲು ಒಂದು ಪ್ರಮುಖ ವೇದಿಕೆಯಾಗಲಿದೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ. ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಯಲ್ಲಿ ತೊಡಗಿರುವ ಪಡೆಗಳು, ತಾಂತ್ರಿಕ ತಜ್ಞರು, ಕಾನೂನು ಪರಿಣತರು ಮತ್ತು ವಿಧಿವಿಜ್ಞಾನ ತಜ್ಞರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಭಯೋತ್ಪಾದನೆಯೆಂಬ ಪಿಡುಗಿನ ವಿರುದ್ಧ ಸಂಘಟಿತ ಕ್ರಮ ಕೈಗೊಳ್ಳಲು ವಿವಿಧ ಪಾಲುದಾರರ ನಡುವೆ ಔಪಚಾರಿಕ ಮತ್ತು ಅನೌಪಚಾರಿಕ ಸಂಪರ್ಕ ವ್ಯವಸ್ಥೆಯನ್ನು ಸ್ಥಾಪಿಸುವುದು ಹಾಗೂ ಅವರಲ್ಲಿ ಸಮನ್ವಯತೆಯನ್ನು ವೃದ್ಧಿಸುವುದು ಈ ಸಮಾವೇಶದ ಪ್ರಮುಖ ಉದ್ದೇಶವಾಗಿದೆ. ಅಲ್ಲದೆ, ವಿದೇಶಿ ಸಾಕ್ಷ್ಯಗಳನ್ನು ಸಂಗ್ರಹಿಸುವುದು, ಭಯೋತ್ಪಾದನಾ ನಿರೋಧಕ ತನಿಖೆಗಳಲ್ಲಿ ಡಿಜಿಟಲ್ ವಿಧಿವಿಜ್ಞಾನ ಮತ್ತು ದತ್ತಾಂಶ ವಿಶ್ಲೇಷಣೆ ಹಾಗೂ ರಾಷ್ಟ್ರೀಯ ಭದ್ರತೆಗೆ ಎದುರಾಗುತ್ತಿರುವ ಹೊಸ ಮಾದರಿಯ ಬೆದರಿಕೆಗಳ ಕುರಿತು ವಿಶೇಷ ಗೋಷ್ಠಿಗಳು ನಡೆಯಲಿವೆ. ರಾಷ್ಟ್ರೀಯ ತನಿಖಾ ಸಂಸ್ಥೆ ಎನ್‌ಐಎ ಈ ಸಮಾವೇಶವನ್ನು ಆಯೋಜಿಸಿದೆ.

<>><><*><><<>

ಉಪರಾಷ್ಟ್ರಪತಿ ಸಿ. ಪಿ. ರಾಧಾಕೃಷ್ಣನ್ ಅವರು ನವದೆಹಲಿಯಲ್ಲಿ ನಿನ್ನೆ ನಡೆದ 'ಸುಶಾಸನ ದಿನ' ಆಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡರು. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದ ಅಂಗವಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹಂಚಿಕೊಂಡಿರುವ ಉಪರಾಷ್ಟ್ರಪತಿಗಳು, ವಾಜಪೇಯಿ ಅವರ ಪಾರದರ್ಶಕ, ಜವಾಬ್ದಾರಿಯುತ ಮತ್ತು ಅಂತರ್ಗತ ಆಡಳಿತದ ದೃಷ್ಟಿಕೋನ ಹಾಗೂ ಪ್ರಜಾಪ್ರಭುತ್ವ, ಪ್ರಾಮಾಣಿಕತೆ ಮತ್ತು ಸಾರ್ವಜನಿಕ ಸೇವೆಯ ಬಗ್ಗೆ ಅವರಿಗಿದ್ದ ಅಚಲ ಬದ್ಧತೆಯನ್ನು ಶ್ಲಾಘಿಸಿದರು. ಈ ಸಮಾರಂಭದಲ್ಲಿ ವಾಜಪೇಯಿ ಅವರು ಪಾಲಿಸುತ್ತಿದ್ದ ಮೌಲ್ಯಗಳನ್ನು ಪ್ರತಿಬಿಂಬಿಸುವ 'ಸತ್ಯವಾದಿ ರಾಜ ಹರಿಶ್ಚಂದ್ರ' ನಾಟಕ ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು. ವಾಜಪೇಯಿ ಅವರು ರಾಷ್ಟ್ರಕ್ಕೆ ಸ್ಫೂರ್ತಿ ನೀಡಿದ ಮತ್ತು ದೇಶದ ಭವಿಷ್ಯವನ್ನು ರೂಪಿಸಿದ ಮಹಾನ್ ರಾಜತಾಂತ್ರಿಕರಾಗಿದ್ದರು ಎಂದು ಉಪರಾಷ್ಟ್ರಪತಿ ಬಣ್ಣಿಸಿದರು. ಸಂವಾದ, ಘನತೆ ಮತ್ತು ಸಮರ್ಪಣಾ ಮನೋಭಾವದ ಮೇಲೆ ವಾಜಪೇಯಿ ಅವರಿಗೆ ಅಪಾರ ನಂಬಿಕೆಯಿತ್ತು ಮತ್ತು ಆ ಮೌಲ್ಯಗಳು ಇಂದಿಗೂ ಭಾರತವನ್ನು ಪ್ರಗತಿ ಮತ್ತು ಸೌಹಾರ್ದತೆಯ ಹಾದಿಯಲ್ಲಿ ಮುನ್ನಡೆಸುತ್ತಿವೆ ಎಂದು ಅವರು ತಿಳಿಸಿದರು.

<>><><*><><<>

ಕಾರ್ಯಾಚರಣೆಯ ಭದ್ರತೆ ಮತ್ತು ಜವಾಬ್ದಾರಿಯುತ ಆನ್‌ಲೈನ್ ನಡವಳಿಕೆಗೆ ಒತ್ತು ನೀಡಲು ಭಾರತೀಯ ಸೇನೆ, ತನ್ನ ಸಿಬ್ಬಂದಿಗೆ ಸಾಮಾಜಿಕ ಜಾಲತಾಣಗಳ ಬಳಕೆಯ ಬಗ್ಗೆ ಆಂತರಿಕ ಸುತ್ತೋಲೆ ಹೊರಡಿಸಿದೆ. ಇದರನ್ವಯ ಸೇನಾ ಸಿಬ್ಬಂದಿ ಇನ್‌ಸ್ಟಾಗ್ರಾಮ್ ಅನ್ನು ಕೇವಲ ಮಾಹಿತಿ ವೀಕ್ಷಣೆ ಮತ್ತು ಮೇಲ್ವಿಚಾರಣೆಗಾಗಿ ಮಾತ್ರ ಬಳಸಲು ಅನುಮತಿಸಲಾಗಿದೆ. ಆದರೆ ಈ ವೇದಿಕೆಯಲ್ಲಿ ಯಾವುದೇ ಕಾಮೆಂಟ್‌ಗಳನ್ನು ಮಾಡುವಂತಿಲ್ಲ ಅಥವಾ ವೈಯಕ್ತಿಕ ಅಭಿಪ್ರಾಯಗಳನ್ನು ಹಂಚಿಕೊಳ್ಳುವಂತಿಲ್ಲ ಎಂದು ಮೂಲಗಳು ಸ್ಪಷ್ಟಪಡಿಸಿವೆ. ಸ್ಕೈಪ್, ವಾಟ್ಸಾಪ್, ಟೆಲಿಗ್ರಾಮ್ ಮತ್ತು ಸಿಗ್ನಲ್ ಅಪ್ಲಿಕೇಶನ್‌ಗಳ ಮೂಲಕ ಸಾಮಾನ್ಯ ಸ್ವರೂಪದ ವರ್ಗೀಕರಿಸದ ಮಾಹಿತಿಯನ್ನು ಮಾತ್ರ ವಿನಿಮಯ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಇಂತಹ ಸಂವಹನವು ಕೇವಲ ಪರಿಚಿತ ವ್ಯಕ್ತಿಗಳ ನಡುವೆ ಮಾತ್ರ ಇರಬೇಕು ಮತ್ತು ಸ್ವೀಕರಿಸುವವರನ್ನು ಸರಿಯಾಗಿ ಗುರುತಿಸುವ ಜವಾಬ್ದಾರಿ ಬಳಕೆದಾರರದ್ದೇ ಆಗಿರುತ್ತದೆ ಎಂದು ತಿಳಿಸಲಾಗಿದೆ. ಯೂಟ್ಯೂಬ್, ಎಕ್ಸ್ , ಕ್ವೋರಾ ಮತ್ತು ಇನ್‌ಸ್ಟಾಗ್ರಾಮ್‌ಗಳ ವಿಷಯದಲ್ಲಿ, ಕೇವಲ ಜ್ಞಾನಾರ್ಜನೆ ಅಥವಾ ಮಾಹಿತಿ ಪಡೆಯಲು ಮಾತ್ರ ಅವಕಾಶ ನೀಡಲಾಗಿದೆ. ಬಳಕೆದಾರರು ಸ್ವತಃ ಯಾವುದೇ ವಿಷಯ, ಸಂದೇಶ ಅಥವಾ ಪೋಸ್ಟ್‌ಗಳನ್ನು ಈ ವೇದಿಕೆಗಳಲ್ಲಿ ಅಪ್‌ಲೋಡ್ ಮಾಡುವುದನ್ನು ನಿಷೇಧಿಸಲಾಗಿದೆ. ಇದಲ್ಲದೆ, ಲಿಂಕ್ಡ್‌ಇನ್ ಅನ್ನು ಕೇವಲ ಉದ್ಯೋಗದ ಅರ್ಜಿಯನ್ನು ಅಪ್‌ಲೋಡ್ ಮಾಡಲು ಮತ್ತು ಸಂಭಾವ್ಯ ಉದ್ಯೋಗದಾತರ ಬಗ್ಗೆ ಮಾಹಿತಿ ಪಡೆಯಲು ಮಾತ್ರ ಬಳಸಬಹುದಾಗಿದೆ.

<>><><*><><<>

ಭಾರತೀಯ ರೈಲ್ವೆಯು ಇಂದಿನಿಂದ ಜಾರಿಗೆ ಬರುವಂತೆ ಟಿಕೆಟ್ ದರ ರಚನೆಯನ್ನು ತರ್ಕಬದ್ಧಗೊಳಿಸಿ ಪರಿಷ್ಕರಿಸಿದೆ. ಪ್ರಯಾಣಿಕರಿಗೆ ಹೊರೆಯಾಗದಂತೆ ಕೈಗೆಟುಕುವ ದರವನ್ನು ಕಾಪಾಡಿಕೊಳ್ಳುವುದು ಮತ್ತು ರೈಲ್ವೆ ಕಾರ್ಯಾಚರಣೆಯ ಆರ್ಥಿಕ ಸುಸ್ಥಿರತೆಯನ್ನು ಕಾಪಾಡುವುದು ಇದರ ಉದ್ದೇಶವಾಗಿದೆ. ಪರಿಷ್ಕೃತ ದರ ಪಟ್ಟಿಯ ಪ್ರಕಾರ, ಉಪನಗರ ರೈಲು ಸೇವೆಗಳು ಮತ್ತು ಸೀಸನ್ ಟಿಕೆಟ್‌ಗಳ ದರದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಇಂದಿನಿಂದ ಕಾಯ್ದಿರಿಸುವ ಟಿಕೆಟ್‌ಗಳಿಗೆ ಮಾತ್ರ ಈ ಹೊಸ ದರ ಅನ್ವಯಿಸಲಿದ್ದು, ಮೊದಲೇ ಕಾಯ್ದಿರಿಸಿದ ಟಿಕೆಟ್‌ಗಳಿಗೆ ಯಾವುದೇ ಹೆಚ್ಚುವರಿ ಶುಲ್ಕ ವಿಧಿಸಲಾಗುವುದಿಲ್ಲ. ಸಾಮಾನ್ಯ ಎಸಿ ರಹಿತ ಸೇವೆಗಳಲ್ಲಿ, ೨೧೫ ಕಿಲೋಮೀಟರ್‌ವರೆಗಿನ ಪ್ರಯಾಣಕ್ಕೆ ದರ ಹೆಚ್ಚಳವಿಲ್ಲ. ೨೧೬ ರಿಂದ ೭೫೦ ಕಿಲೋಮೀಟರ್ ದೂರಕ್ಕೆ ಐದು ರೂಪಾಯಿ, ೭೫೧ ರಿಂದ ೧೨೫೦ ಕಿಲೋಮೀಟರ್‌ಗೆ ಹತ್ತು ರೂಪಾಯಿ, ಹೀಗೆ ಹಂತ ಹಂತವಾಗಿ ೨೦ ರೂಪಾಯಿಗಳವರೆಗೆ ದರ ಹೆಚ್ಚಿಸಲಾಗಿದೆ. ಸ್ಲೀಪರ್ ಮತ್ತು ಪ್ರಥಮ ದರ್ಜೆಗಳಲ್ಲಿ ಪ್ರತಿ ಕಿಲೋಮೀಟರ್‌ಗೆ ಒಂದು ಪೈಸೆಯಂತೆ ದರ ಪರಿಷ್ಕರಿಸಲಾಗಿದೆ. ಎಕ್ಸ್‌ಪ್ರೆಸ್ ರೈಲುಗಳ ಎಸಿ ಮತ್ತು ನಾನ್-ಎಸಿ ದರ್ಜೆಗಳಲ್ಲಿ ಪ್ರತಿ ಕಿಲೋಮೀಟರ್‌ಗೆ ಎರಡು ಪೈಸೆಯಷ್ಟು

ಹೆಚ್ಚಳ ಮಾಡಲಾಗಿದೆ. ವಂದೇ ಭಾರತ್, ರಾಜಧಾನಿ, ಶತಾಬ್ದಿ ಮತ್ತು ದುರಂತೋ ಅಂತಹ ಪ್ರಮುಖ ರೈಲುಗಳ ಮೂಲ ದರಗಳನ್ನು ಸಹ ಇದಕ್ಕೆ ಅನುಗುಣವಾಗಿ ಪರಿಷ್ಕರಿಸಲಾಗಿದೆ. ಕಾಯ್ದಿರಿಸುವಿಕೆ ಶುಲ್ಕ ಅಥವಾ ಸೂಪರ್‌ಫಾಸ್ಟ್ ಸರ್‌ಚಾರ್ಜ್‌ಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ರೈಲ್ವೆ ಸಚಿವಾಲಯ ಸ್ಪಷ್ಟಪಡಿಸಿದೆ.

<>><><*><><<>

ಭಾರತಕ್ಕೆ ನೇಪಾಳದ ರಾಯಭಾರಿ ಶಂಕರ್ ಪ್ರಸಾದ್ ಶರ್ಮಾ ನಿನ್ನೆ ಉತ್ತರಾಖಂಡದ ಪಿಥೋರಗಢ ಜಿಲ್ಲೆಯ ಚಾರ್ಚೋಮಾ ಗ್ರಾಮದಲ್ಲಿ ಭಾರತ-ನೇಪಾಳ ಗಡಿಯಲ್ಲಿ ಕಾಳಿ ನದಿಗೆ ನಿರ್ಮಿಸಲಾಗುತ್ತಿರುವ ಮೋಟಾರ್ ಸೇತುವೆಯನ್ನು ಪರಿಶೀಲಿಸಿದರು. ನೇಪಾಳ ರಾಯಭಾರ ಕಚೇರಿಯ ಅಧಿಕಾರಿಗಳೊಂದಿಗೆ ಸೇತುವೆಯನ್ನು ಪರಿಶೀಲಿಸಿದ ನಂತರ, ಶಂಕರ್ ಪ್ರಸಾದ್ ಶರ್ಮಾ, ಈ ಸೇತುವೆಯ ಮೂಲಕ ವಾಣಿಜ್ಯ ಚಟುವಟಿಕೆಗಳು ಶೀಘ್ರದಲ್ಲೇ ಪ್ರಾರಂಭವಾಗುವ ನಿರೀಕ್ಷೆಯಿದೆ ಎಂದು ಹೇಳಿದರು. ಈ ಸೇತುವೆ, ಭಾರತ ಮತ್ತು ನೇಪಾಳ ನಡುವಿನ ಸಂಬಂಧವನ್ನು ಮತ್ತಷ್ಟು ಬಲಪಡಿಸುತ್ತದೆ.

<>><><*><><<>

ಈಶಾನ್ಯ ಲೆಬನಾನ್‌ನಲ್ಲಿ ಇಸ್ರೇಲ್ ನಡೆಸಿದ ದಾಳಿಯಲ್ಲಿ, ಇರಾನ್‌ನ ಕುಡ್ಸ್ ಪಡೆಯ ಹಿರಿಯ ಕಮಾಂಡರ್ ಹತರಾಗಿದ್ದಾರೆ. ಇಸ್ರೇಲ್ ರಕ್ಷಣಾ ಪಡೆಗಳು ಮತ್ತು ಶಿನ್ ಬೆಟ್ ಭದ್ರತಾ ಸಂಸ್ಥೆ ನೀಡಿರುವ ಜಂಟಿ ಹೇಳಿಕೆಯಲ್ಲಿ, ಹುಸೇನ್ ಮಹಮೂದ್ ಮಾರ್ಷದ್ ಅಲ್-ಜವಾಹರಿ, ಕುಡ್ಸ್ ಪಡೆಯ ಕಾರ್ಯಾಚರಣೆ ಘಟಕದಲ್ಲಿ ಉನ್ನತ ಕಮಾಂಡರ್ ಆಗಿದ್ದರು ಎಂದು ತಿಳಿಸಿದೆ. ಇಸ್ರೇಲ್ ಹೇಳಿಕೆಯ ಪ್ರಕಾರ, ಇತ್ತೀಚಿನ ವರ್ಷಗಳಲ್ಲಿ ಸಿರಿಯಾ-ಲೆಬನಾನ್ ಕಣದಲ್ಲಿ ಇಸ್ರೇಲ್ ವಿರುದ್ಧ ಭಯೋತ್ಪಾದಕ ಸಂಚುಗಳನ್ನು ನಡೆಸುವಲ್ಲಿ ಅಲ್-ಜವಾಹರಿ ಭಾಗಿಯಾಗಿದ್ದರು.

<>><><*><><<>

ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ ಬಿಎನ್‌ಪಿಯ ಕಾರ್ಯಕಾರಿ ಅಧ್ಯಕ್ಷ ತಾರಿಕ್ ರೆಹಮಾನ್, ದೇಶದಲ್ಲಿ ಶಾಂತಿ ಕಾಪಾಡುವಂತೆ ಕರೆ ನೀಡಿದ್ದಾರೆ. ಬಾಂಗ್ಲಾ ದೇಶ, ಮುಸ್ಲಿಮರು, ಹಿಂದೂಗಳು, ಬೌದ್ಧರು ಮತ್ತು ಕ್ರಿಶ್ಚಿಯನ್ನರು ಸೇರಿದಂತೆ ಎಲ್ಲಾ ಧರ್ಮದ ಜನರಿಗೆ ಸೇರಿದೆ ಎಂದು ಅವರು ತಿಳಿಸಿದ್ದಾರೆ. ೧೭ ವರ್ಷಗಳ ನಂತರ ಢಾಕಾಗೆ ಆಗಮಿಸಿದ ನಂತರ ಪಕ್ಷದ ಬೆಂಬಲಿಗರನ್ನು ಉದ್ದೇಶಿಸಿ ಮಾಡಿದ ಮೊದಲ ಭಾಷಣದಲ್ಲಿ ರೆಹಮಾನ್, ಕಳೆದ ವರ್ಷ ಆಗಸ್ಟ್‌ನಲ್ಲಿ, ಮಧ್ಯಂತರ ಸರ್ಕಾರ ಅಧಿಕಾರ ವಹಿಸಿಕೊಂಡಾಗಿನಿಂದ ಬಾಂಗ್ಲಾ ದೇಶದಲ್ಲಿ, ಅಲ್ಪಸಂಖ್ಯಾತರು, ವಿಶೇಷವಾಗಿ ಹಿಂದೂಗಳು ಅವರ ವಿರುದ್ಧದ ಸರಣಿ ಘಟನೆಗಳಿಂದ ತೊಂದರೆಗೊಳಗಾಗಿದ್ದಾರೆ. ಎಲ್ಲರೂ ಒಟ್ಟಾಗಿ ದೇಶವನ್ನು ನಿರ್ಮಿಸುವ ಸಮಯ ಬಂದಿದೆ ಎಂದು ಹೇಳಿದ್ದಾರೆ.

<>><><*><><<>

ಭಾರತ ಮತ್ತು ಶ್ರೀಲಂಕಾ ತಂಡಗಳ ನಡುವಿನ ಐದು ಪಂದ್ಯಗಳ ಮಹಿಳಾ ಟಿ-೨೦ ಅಂತಾರಾಷ್ಟ್ರೀಯ ಕ್ರಿಕೆಟ್ ಸರಣಿಯ ಮೂರನೇ ಪಂದ್ಯ ಇಂದು ತಿರುವನಂತಪುರದ ಗ್ರೀನ್‌ಫೀಲ್ಡ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿದೆ. ಪಂದ್ಯ ಸಂಜೆ ೭ ಗಂಟೆಗೆ ಆರಂಭವಾಗಲಿದೆ. ಸರಣಿಯಲ್ಲಿ ಆತಿಥೇಯ ಭಾರತ ತಂಡ ಈಗಾಗಲೇ ೨-೦ ಅಂತರದಲ್ಲಿ ಮುನ್ನಡೆ ಸಾಧಿಸಿದೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ ><><<>